೧-೦೦ ಪಿ.ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕ್ಷಮೆ ಕೇಳುವ ಪ್ರಶ್ನೆ ಇಲ್ಲ. ಸರ್ಕಾರ ಎಷ್ಟೋ ಆಜ್ಞೆಗಳನ್ನು ಮಾಡಿದ್ದರೂ ಕಾಂಟ್ರಾಕ್ಟರ್ ಮೂಲಕ ಕೆಲಸ ಮಾಡಿಸಿದ್ದೇವೆಂದು ಈ ಸಭೆಯಲ್ಲಿ ಹೇಳುತ್ತಿದ್ದೇನೆ. ನಿಮ್ಮ ತಾಲ್ಲೂಕಿನಲ್ಲಿ ಕೂಡ ಕಾಂಟ್ರಾಕ್ಟರಿಗೆ ಕೊಡತಕ್ಕ ಹಣ ಬಾಕಿ ಇದೆ. ಈ ವಿಚಾರವನ್ನು ಸಭೆಯಲ್ಲಿ ಚರ್ಚೆ ಮಾಡಿದರೆ ಸರ್ಕಾರಕ್ಕೂ ತೊಂದರೆಯಾಗುತ್ತದೆ, ನಿಮಗೂ ತೊಂದರೆಯಾಗುತ್ತದೆಂದು ಹೇಳಿದೆ.

ಶ್ರೀ ಕೆ. ಬಿ. ಕೋಳಿವಾಡ.—ನಾನೂ ಸಹ ಆ ನೋಟೀಸಿಗೆ ಸಹಿ ಮಾಡಿರುವುದರಿಂದ ನಾನೊಂದು ಪ್ರಶ್ನೆ ಕೇಳಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೊಬ್ಬರದ್ದೇ ಸಹಿ ಇದೆ. ನೀವು ಬೇಕಾದರೆ ಮತ್ತೊಂದು ನೋಟೀಸ್ ಕೊಡಿ, ನೋಡೋಣ.

ಶ್ರೀ ಬಿ. ಲಕ್ಕಪ್ಪ.—ಈ ಕಾಮಗಾರಿಗಳನ್ನು ಕಾಂಟ್ರಾಕ್ಟರಿಗೆ ಎಂಟ್ರಸ್ಟ್ ಮಾಡಿ ಮಾಡಿಸಿದ್ದಾರೆ. ಇಲ್ಲದೆ ಹೋದರೆ ಅಧಿಕಾರಿಗಳು ಹಣ ಡ್ರಾ ಮಾಡಿ ಯಾರಿಗೆ ಕೊಡುತ್ತಾರೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಬರಗಾಲದ ಬಗ್ಗೆ ವಿವರವಾಗಿ ಹೇಳಿಕೆ ಕೊಡುವವನಿದ್ದೇನೆ. ಆಗ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡೋಣ. ಅದು ಲಕ್ಕಪ್ಪನವರಿಗೂ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಕೆಲಸ ಆದಮೇಲೆ ಹಣ ಕೊಡಬೇಕು. ಆ ಬಗ್ಗೆ ವಿವರವಾದ ಹೇಳಿಕೆ ಕೊಡುತ್ತೇನೆ. ಈ ವರ್ಷ ಕೆಲವು ಭಾಗದಲ್ಲಿ ಮಳೆ ಆಗಿಲ್ಲ. ಆ ಬಗ್ಗೆ ಈ ಮನೆಯಲ್ಲಿ ಹೇಳಿಕೆ ನೀಡಿದ ಮೇಲೆ ವಿವರವಾಗಿ ಚರ್ಚಿಸೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಕಾಂಟ್ರಾಕ್ಟ್ ನೌಕರರು ಹತ್ತು ಸಾವಿರ ಜನ ಬರುತ್ತಿದ್ದಾರೆ...

ಅಧ್ಯಕ್ಷರು.—ನೀವು ಈಗ ಕುಳಿತುಕೊಳ್ಳಿ. ನೀವು ಏನು ಹೇಳಿದರೂ ಅದು ರೆಕಾರ್ಡ್ ಆಗುವುದಿಲ್ಲ. ನೀವು ರೂಲ್ ೩೫ರ ಪ್ರಕಾರ ನೋಟೀಸ್ ಕೊಟ್ಟಿದ್ದೀರಲ್ಲ ಅದನ್ನು ನಾಳೆ ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಬೇಕಲ್ಲವೆ? ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಒಂದು ಅಡ್ಜರ್ನ್‌ಮೆಂಟ್ ನೋಷನ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ನೀವು ಕೋರ್ಟಿನಲ್ಲಿ ಹೇಗೆ ವಕಾಲತ್ತು ಮಾಡುತ್ತಿದ್ದರಿ? ಈಗ ೩೫ರ ನಿಯಮದ ಪ್ರಶ್ನೆಗಳನ್ನು ತೆಗೆದುಕೊಳ್ಳಬೇಕು, ಮಂತ್ರಿಗಳೇನೋ ಹೇಳಿಕೆ ಕೊಡಬೇಕೆಂದಿದ್ದಾರೆ. ದಯವಿಟ್ಟು ತಾವು ಕುಳಿತುಕೊಳ್ಳಿ.

ಮಂತ್ರಿಯವರಿಂದ ಹೇಳಿಕೆ

ಕೃಷ್ಣಾ ಬೇಸಿನ್ ಯೋಜನೆಗಳಿಗೆ ಹಣ ಒದಗಿಸುವ ಬಗ್ಗೆ ಪತ್ರಿಕೆಯಲ್ಲಿ ತಪ್ಪು ವರದಿ ಮಾಡಿರುವ ಬಗ್ಗೆ ಸ್ಪಷ್ಟೀಕರಣ

ಶ್ರೀ ಹೆಚ್. ಡಿ. ದೇವೇಗೌಡ.—ನಿನ್ನೆ ಸದನದಲ್ಲಿ ರೂಲ್ ೩೫ರ ವ್ಯಾಪ್ತಿಯಲ್ಲಿ ಕೃಷ್ಣಾ ನದಿಗೆ ಸಂಬಂಧಪಟ್ಟ ಹಾಗೆ ೩ ಯೋಜನೆಗಳನ್ನು ತೆಗೆದುಕೊಳ್ಳತಕ್ಕದ್ದರ ಬಗ್ಗೆ ಈ ಸದನದ ಗಮನವನ್ನು ಶ್ರೀ ಕಡಪಟ್ಟಿಯವರು ಸೆಳೆಯತಕ್ಕ ಪ್ರಯತ್ನ ಮಾಡಿದರು. ನಾನು ಉತ್ತರಿಸತಕ್ಕ ಕಾಲದಲ್ಲಿ, ನಾನು ತಮ್ಮ ಘನ ಅಧ್ಯಕ್ಷತೆಯಲ್ಲಿ ಉತ್ತರಿಸಿದ್ದೇನೆ. ಆದರೆ ಪತ್ರಿಕಾ ವರದಿಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸಭೆಯ ಕಾರ್ಯಕಲಾಪದ ವರದಿಯನ್ನು ವಿಕೃತಗೊಳಿಸಿ, ವ್ಯಕ್ತಿಯ ತೇಜೋವಧೆಯನ್ನು ಮಾಡತಕ್ಕ ಅಪಪ್ರವೃತ್ತಿ ಕಾರ್ಯವನ್ನು ಯಾರಾದರೂ ಮಾಡಿದರೆ ಬಹುಶಃ ಈ ಸಭೆಯ ವಿಶ್ವಾಸ ಹೋಗುತ್ತದೆ. ಹೊರಗಡೆ ಅವರು ಏನಾದರೂ ಬರೆದುಕೊಳ್ಳಲಿ, ಅವರವರ ಖುಷಿ ಬರೆದುಕೊಳ್ಳುತ್ತಾರೆ. ರಾಜಕೀಯವಾಗಿ ಯಾರನ್ನು ಮುಗಿಸಬೇಕು, ಯಾರನ್ನು ಎತ್ತ ಬೇಕೆಂಬ ಸಂಚು, ಪಿತೂರಿ ನಡೆಯುತ್ತದೆ. ಅದು ಈ ದೇಶದಲ್ಲಿ ನಡೆಯುವುದು ಸಹಜ. ಬಹುಕಾಲದಿಂದ ನಡೆದುಕೊಂಡು ಬಂದಿದೆ. ಆದರೆ ಈ ಸದನದಲ್ಲಿ ನಡೆಯುವ ಕಾರ್ಯಕಲಾಪ ತಮ್ಮ ಘನ ಅಧ್ಯಕ್ಷತೆಯಲ್ಲಿ ವಿಕೃತವಾಗಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಪತ್ರಿಕೆಯ ವರದಿ ಈ ರೀತಿ ಇದೆ. "House corners Deve Gowda." I am still sitting in the fifth seat in the front row. ನಾನು ಹಿಂದೇ ಸೀಟಿನಲ್ಲಿ ಕುಳಿತಿದ್ದೇನೆ. ಕಾರ್ನರ್ ಮಾಡಿದರೆ

ಅಲ್ಲಿ ಕುಳಿತುಕೊಳ್ಳುತ್ತೇನೆ. This paper cannot corner me. It can be cornered only by my party and the people who are sitting this side. The paper says :

> "Public Works Minister H. D. Deve Gowda was cornered by almost the entire House with the Janatha members certainly not lagging behind when he declared that if the House so desired the Government would even bring forth a resolution making it mandatory to spend Rs. 300 crores required....."

ಸದನದ ಕಾರ್ಯಕಲಾಪವನ್ನು ತರಿಸಿ ತಾವು ನೋಡಬೇಕು. ತಾವೇ ಆ ಸ್ಥಾನದಲ್ಲಿ ಕುಳಿತ್ತಿದ್ದೀರಿ. ಮತ್ತು ತಾವೇ ಹೇಳಿದಿರಿ, ಮಾನ್ಯ ಖಾರ್ಗೆಯವರ ೨೫೦ ಕೋಟಿ ರೂಪಾಯಿಗಳನ್ನು ಕೊಡಿ ಎಂದು ಹೇಳಿದರು. ಈ ಕಡೆಯಿಂದ ೩೦೦ ಕೋಟಿ ರೂಪಾಯಿಗಳನ್ನು ಕೊಡಿ ಎಂದು ಒತ್ತಾಯಿಸಿದರು. ಅದು ಸದನದ ತೀರ್ಮಾನಕ್ಕೆ ಬಿಟ್ಟಿದ್ದುದು. ಏಕೆಂದರೆ ಸದನ ದೊಡ್ಡದು. ನೀವು ಏನು ತೀರ್ಮಾನ ಮಾಡುತ್ತೀರಿ ಅದಕ್ಕೆ ನಾನು ಬದ್ಧ. ಸಭೆ ಒಪ್ಪಿದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆಂದು ಹೇಳಿದೆ. This is what I said. But, did I say that I am going to move a resolution?

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲ, ರೆಸಲ್ಯೂಷನ್ ಮೂವ್ ಮಾಡಿ ಎಂದು ಹೇಳಿದರು.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಏನು ಬೇಕಾದರೂ ಹೇಳಲಿ. ನಾನು ಏನು ಹೇಳಿದೆ ಎಂದರೆ ನಿಯಮಾವಳಿ ಇದೆ, ನೀವು ಏನು ಬೇಕಾದರೂ ತೀರ್ಮಾನ ಮಾಡಿ ಎಂದು ಹೇಳಿದ್ದೇನೆ. ಈ ರೀತಿ ಪತ್ರಿಕೆಯವರು ಸದನದ ಕಾರ್ಯಕಲಾಪವನ್ನು ವಿಕೃತಗೊಳಿಸಿ ಬರೆಯುವುದು ಸರಿಯಲ್ಲ. ಅವರು ಹೊರಗಡೆ ಏನು ಬೇಕಾದರೂ ಬರೆದುಕೊಳ್ಳಲಿ. ತಮ್ಮ ಕಾಲದಲ್ಲಿ ಇದಕ್ಕೆ ಅವಕಾಶವಾಗ ಬಾರದು. They have got freedom. But here what has been transacted, what has been transpired, they cannot report it wrongly. You must pull up such reporting. ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಸದನ ದೊಡ್ಡದು ಎಂಬುದನ್ನು ಇವತ್ತು ಒಪ್ಪಿಕೊಳ್ಳುತ್ತೇನೆ, ನಾಳೆಯೂ ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಅಷ್ಟು ಗೌರವ ಕೊಟ್ಟಿದ್ದೇವೆ. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಹೊರಗಡೆ ನಾನು ಹೇಳಿದ್ದೇನೆ, ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇವತ್ತು ತುರುವೇಕೆರೆಗೆ ತುಮಕೂರು ಜಿಲ್ಲೆಯಿಂದ ನೀರು ಬರತಕ್ಕ ಕಾರ್ಯಕ್ರಮದಲ್ಲಿ ಕಾವೇರಿ ಬೇಸಿನ್ನಿಗೆ ನೂರು ಕೋಟಿ ರೂಪಾಯಿಯಾದರೂ ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಕೃಷ್ಣ ಬೆಸಿನ್ನಿಗೆ ೨೦೦ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೊರಗಡೆ ಹೇಳಿದ್ದೇವೆ. ಇಲ್ಲಿಯೂ ಹೇಳುತ್ತೇವೆ. But the ultimate decision is by the House. ಆ ವಿಷಯ ಬೇರೆ.

ಶ್ರೀ ಕೆ. ಹೆಚ್ ಪಾಟೀಲ್.—ಪತ್ರಿಕೆಯವರು ತಪ್ಪು ಬರೆದರೆ ಆ ಪ್ರಶ್ನೆ ಬೇರೆ. ನಿಮ್ಮ ಕಡೆಯ ಸದಸ್ಯರೇ ಹೇಳಿದ್ದಾರೆ ನೀವು ರೆಸಲ್ಯೂಷನ್ ತನ್ನಿ ನಾವು ಒಪ್ಪುತ್ತೇವೆ. ಇಲ್ಲದಿದ್ದರೆ ನಾವು ರೆಸಲ್ಯೂಷನ್ ತರುತ್ತೇವೆ, ನೀವು ಒಪ್ಪಬೇಕು ಎಂದು. ಅದಕ್ಕೆ ಒಪ್ಪುತ್ತೇನೆಂದು ನೀವು ಹೇಳಿದ್ದೀರಿ.

ಅಧ್ಯಕ್ಷರು.—ನೀವೂ ನಿರ್ಣಯ ತರಲಿಕ್ಕೆ ಅಧಿಕಾರ ಇದೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಪಾಟೀಲ್.—ನಾವು ತಂದರೆ ಒಪ್ಪಲಿಕ್ಕಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—೧೯೬೬ರಲ್ಲಿ ನಾನು ವಿರೋಧ ಪಕ್ಷದಲ್ಲಿ ಕುಳಿತಿದ್ದೆ. At that time I moved a non-official resolution on Cauvery basin. The entire House passed the resolution unanimously. ನಾನು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನದಿ ನೀರಿನ ಬಳಕೆಯ ಬಗ್ಗೆ ಮಂಡನೆ ಮಾಡಿದಂಥ ಖಾಸಗಿ ನಿರ್ಣಯ ಈ ಸದನದಲ್ಲಿ ಅವಿರೋಧವಾಗಿ ಪಾಸಾಯಿತು. ಆ ಒಂದು ಇತಿಹಾಸ ಇದೆ. ರಾಜ್ಯದ ಹಿತರಕ್ಷಣೆಯ ಬಗ್ಗೆ ವಿರೋಧ ಪಕ್ಷ, ಆಳುವ ಪಕ್ಷ ಎಂಬ ಪ್ರಶ್ನೆ ಇಲ್ಲ. ಸದನದಲ್ಲಿ ಎಲ್ಲರೂ ಆಸ್ಪೋ ಆಸಕ್ತಿ ಹೊಂದಿದ್ದಾರೆ. It is for the House to decide.

ಶ್ರೀ ಕೆ. ಹೆಚ್. ಪಾಟೀಲ್.—ಆಂಥ ನಿರ್ಣಯವನ್ನು ನೀವು ತನ್ನಿ ಎಂದು ಹೇಳಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ತರುತ್ತೇನೆಂದು ಎಲ್ಲಿ ಹೇಳಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ.—ಲೋಕೋಪಯೋಗಿ ಸಚಿವರು ಒಂದು ದೈನಿಕ ಪತ್ರಿಕೆಯಲ್ಲಿ ನಿನ್ನೆ ನಡೆದಂಥ ಪ್ರಸಂಗದ ಬಗ್ಗೆ ಮತ್ತು ಅದರ ಬಗ್ಗೆ ಬಂದಂತಹ ವ್ಯಾಖ್ಯಾನದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗ ನಿನ್ನೆ ನಡೆದದ್ದು ಇಷ್ಟು ; ಏಕೆಂದರೆ ಈ ಸೂಚನೆ ಬಂದದ್ದು ನಮ್ಮಿಂದ ಅಲ್ಲ. ಮಾನ್ಯ ಪಾಟೀಲರು ಹೇಳಿದ ಪ್ರಕಾರ ೩೦೦ ಕೋಟಿ ರೂಪಾಯಿಗಳ ರೆಸಲ್ಯೂಷನ್ ತರಬೇಕೆಂದು ಕಡಪಟ್ಟಿಯವರೇ ಹೇಳಿದರು.

ಶ್ರೀ ಹೆಚ್.ಡಿ. ದೇವೇಗೌಡ.—ಶ್ರೀಮಾನ್ ಖರ್ಗೆಯವರು ೨೫೦ ಕೋಟಿ ರೂಪಾಯಿ ಆಗುವುದಿಲ್ಲ ೩೦೦ ಕೋಟಿ ರೂಪಾಯಿಗಳನ್ನು ಕೊಡಿ ಎಂದು ಹೇಳಿದರು.

ಶ್ರೀ ಎಂ. ವೀರಪ್ಪಮೊಯಿಲಿ.—ಇನಿಸಿಯೇಟ್ ಮಾಡಿದ್ದು ದು ಟ್ರೆಜರಿ ಬೆಂಚ್‌ನಿಂದ. ಮಾನ್ಯ ಮಂತ್ರಿಗಳಿಂದ ಅದು ಬಂದಿರಬಹುದು, ಅಥವಾ ಒಬ್ಬ ಶಾಸಕರಿಂದಲೂ ಬಂದಿರಬಹುದು, ಆಗ ನಾವು ಏನು ತಿಳಿದುಕೊಳ್ಳಬೇಕು ? he may be a spokesman of the treasury bench, it has come from the treasury bench. If a resolution is moved by treasury bench it gets all credibility and supposing the Minister backs out then, I think it is embarrasing on the part of the Minister and the Government. ಆದ್ದರಿಂದ ನಾವು ತಮ್ಮ ಜನರಿಗೆ ಶಸ್ತ್ರ ಹೇಳಬೇಕೇ ಹೊರತು ಪತ್ರಿಕೆಗಳಿಗೆ, ವಿರೋಧ ಪಕ್ಷದವರಿಗೆ ಹೇಳುವುದಕ್ಕಾಗುವುದಿಲ್ಲ. I have understood the point. ಏತಕ್ಕೆಂದು ಹೇಳಿದರೆ ಇಂಥ ಪರಿಸ್ಥಿತಿ ಕೆಲವು ಸಾರಿ ಬರುತ್ತದೆ.

SRI C.M. REVANASIDDAIAH.—Say of the Member is not the say of the Minister. Mr. Kadapatti is not the Government.

ಶ್ರೀ ಎಂ. ವೀರಪ್ಪಮೊಯಿಲಿ.—ಇಲ್ಲ, ಹಿಂದಿನ ಸಭಾಧ್ಯಕ್ಷರು ಇಲ್ಲಿದ್ದಾರೆ. If a proposal comes from the Member of the treasury bench and the Minister backs out the same and if the entire House says that it should be passed, I feel that it is a point of embarrasment to the Minister and the Government. ಇಂಥ ಪರಿಸ್ಥಿತಿ ನಿನ್ನೆ ಉದ್ಭವ ಆಗಿತ್ತು. ಅದನ್ನು ಒಂದು ರೀತಿಯಲ್ಲಿ ಪತ್ರಿಕೆಯವರು ಕಾಮೆಂಟ್ ಮಾಡಿದ್ದಾರೆ, Let us take it sportively. ಒಂದೊಂದು ಸಾರಿ ದೇವೇಗೌಡರನ್ನು ಹೊಗಳಿ ಬರೆಯುತ್ತಾರೆ. ರಿಪೋರ್ಟಿಂಗ್‌ನಲ್ಲಿ ಹೆಚ್ಚು ಕಡಿಮೆ ಆದರೆ, of course you may take proper action. ರಿಪೋರ್ಟಿಂಗ್‌ನಲ್ಲಿ ವ್ಯತ್ಯಾಸ ಇಲ್ಲ. It is only comment. ಪತ್ರಿಕೆಯವರು ಕಾಮೆಂಟ್ ಮಾಡುತ್ತಾರೆ. We cannot find fault with them, ಸನ್ಮಾನ್ಯ ದೇವೇಗೌಡರಿಗೆ ಕಾವೇರಿ ಯೋಜನೆಗಳ ಬಗ್ಗೆ ಇರತಕ್ಕಂಥ ಅಥವಾ ಕೃಷ್ಣ ನದಿ ನೀರಿನ ಬಗ್ಗೆ ಇರತಕ್ಕಂಥ ಪ್ರಾಮಾಣಿಕತೆ, ವ್ಯಾಕುಲತೆಯನ್ನು ನೋಡಿ ಅವರನ್ನು ಕಾರ್ನರ್ ಮಾಡುವ ತರಹ ಅಭಿಪ್ರಾಯಪಡುವುದಿಲ್ಲ. We appreciate your sincerity in implementing the projects. ಆ ಕಡೆಯವರಾಗಲೀ, ಈ ಕಡೆಯವರಾಗಲೀ, we would like arms you with more powers so that you can function effectively. ಏನು ಹೇಳಿದ್ದಾರೆ ಎಂದರೆ ಸರ್ಕಾರದ ಆದ್ಯತೆಯನ್ನು ಬದಲಾವಣೆ ಮಾಡಿ ನೀರಾವರಿಗೆ ಹೆಚ್ಚು ಹಣ ಕೊಡಬೇಕು ಎಂದು ಹೇಳಿದ್ದಾರೆ. That means you are pleading for more power and priority for irrigation. ಈಗ ಕಾರ್ನರ್ ಎಂದು ಹೇಳಿದರೂ please take it sportively and take it as a challenge to acquire more power to implement these projects. ಪಬ್ಲಿಕ್ ಲೈಫ್‌ನಲ್ಲಿ ತಮಗಾಗಲೀ, ಸದಸ್ಯರಾಗಲೀ, ಪತ್ರಿಕೆಯವರಿಗಾಗಲೀ, ಇಂಥ ಟೀಕೆ ಟಿಪ್ಪಣಿಗಳು ಬಂದೇ ಬರುತ್ತವೆ. ಆ ಟೀಕೆ ಟಿಪ್ಪಣಿಗಳಿಗೆ we should not find fault. ಹೆಚ್ಚು ಹಣವನ್ನು ತೆಗೆದುಕೊಳ್ಳುವುದಕ್ಕೆ ತಾವು ಇಲ್ಲಿ ಸ್ಟ್ರಾಂಗ್ ಆಡ್ವೊಕೇಟ್ ಮಾಡುವಾಗ ಪ್ರಾಮಿನೆನ್ಸ್ ಕೊಡಬೇಕು. ಕಾಮೆಂಟನ್ನು ಛಾಲೆಂಜ್ ಆಗಿ ತೆಗೆದು ಕೊಳ್ಳಬೇಕು. ಆ ರೀತಿ ಪತ್ರಿಕೆಯವರು ಕಾಮೆಂಟ್ ಮಾಡಿದರೆ please accept it, It is good for you.

ಶ್ರೀ ಎಸ್.ಎಸ್. ಕಡಪಟ್ಟಿ.—ರಾಜ್ಯದ ಹಿತವನ್ನು ಕಾಪಾಡುವಾಗ ಈ ರೀತಿ ಟೀಕೆಗಳು ಬರುತ್ತವೆ.

ಶ್ರೀ ಬಿ. ಬಸವಲಿಂಗಪ್ಪ.—ಪತ್ರಿಕೆಯ ವಿಚಾರವನ್ನು ಈ ಸದನಕ್ಕೆ ಶ್ರೀಮಾನ್ ದೇವೇಗೌಡರು ತಂದು ಬಿಟ್ಟು ಪ್ರಾಪರ್ಟಿ ಎಂದು ಮಾಡಿದ್ದಾರೆ. ಆತುರದಲ್ಲಿ ಶ್ರೀಮಾನ್ ದೇವೇಗೌಡರು ಈ ಕೃಷ್ಣಾನದಿ ನೀರಿನ ಬಗ್ಗೆ ಮಾತನಾಡಿದ್ದುದು ನಿಜ. ಆದರ ಬಗ್ಗೆ ಆಸಕ್ತಿ ವಹಿಸಿದ್ದೂ ನಿಜ. ಉದ್ವೇಗದಿಂದ ಮಾತನಾಡಿದ್ದು ನಿಜ ಆಸಕ್ತಿ ಅಷ್ಟೇ ಅಲ್ಲ, ಅವರು ಆಶ್ವೀಯವಾಗಿ ಆದನ್ನು ಕಾಪಾಡಲಿಕ್ಕೆ ಎಷ್ಟು ಪ್ರಯತ್ನ ಬೇಕೋ ಅಷ್ಟು ಮಾಡುತ್ತೇವೆಂದು ಹೇಳಿದ್ದುದು ನಿಜ. ಮಾನ್ಯ ಖಾರ್ಗೆಯವರು ಏನು ಹೇಳಿದ್ದು ಎಂದರೆ ೧೫ ವರ್ಷದಲ್ಲಿ ಇದನ್ನು ಪೂರೈಸಬೇಕು. ಆದಕ್ಕೆ ೨೫೦-೩೦೦ ಕೋಟಿ ರೂಪಾಯಿಯಾದರೂ ಬೇಕಾಗುತ್ತದೆ. ಆ ಹಣವನ್ನು ಒದಗಿಸುವುದಕ್ಕೆ ನಾವೆಲ್ಲಾ ಸಹಕಾರ ಮಾಡುತ್ತೇವೆ ಎಂದು ಹೇಳಿದರು. ಈ ಸಭೆ ಒಪ್ಪಿದರೆ ನಾನು ಹಿಂಜರಿಯುವುದಿಲ್ಲ ಎಂದು ಹೇಳಿದರು. ಆ ವಿಷಯ ಏನು ಆಯಿತು ? ನಾವೆಲ್ಲರೂ ಒಂದಾಗಿದ್ದೇವೆ. ಇದರಲ್ಲಿ ಜನತಾಪಕ್ಷದ ಪ್ರಶ್ನೆ ಬರುವುದಿಲ್ಲ. ನಾಡಿನ ಪ್ರಶ್ನೆ ಇದು. ರಾಜ್ಯದ ಪ್ರಶ್ನೆ. ಇದರಲ್ಲಿ ಯಾವುದು ರಾಜಕೀಯ ಬೇಡ ಎಂದು ಹೇಳಿದ್ದೇವೆ. ಕೃಷ್ಣ ನದಿಯ ಬಗ್ಗೆ ರಾಜಕೀಯ ಬೇಡ. ರಾಜಕೀಯ ಬಿಟ್ಟು ಸದನದ ಸದಸ್ಯರೆಲ್ಲರೂ ಒಕ್ಕೊರಲಿನಿಂದ ಹೇಳಿದ್ದೇವೆ. ನಾವು ಒಪ್ಪುತ್ತೇವೆ, ರೆಸಲ್ಯೂಷನ್ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೇವೆ. ಆದರೆ ತಾವು ತೆಗೆದುಕೊಂಡು ಬರಲಿಲ್ಲ. ಈಗ ತೆಗೆದುಕೊಂಡು ಬರುತ್ತೀರೋ ಬಿಡುತ್ತೀರೊ ಅದು ಬೇರೆ ವಿಚಾರ.

SRI M. VEERAPPA MOILY.—He can still steal a march over everyone by initiating a resolution on this. ಆದನ್ನು ಮಾಡಿದರೆ ಎಲ್ಲಾ ಪರಿಹಾರವಾಗುತ್ತದೆ.

H.D. DEVEGOWDA.—It is for the House to decide.

ಶ್ರೀ ಬಿ. ಬಸವಲಿಂಗಪ್ಪ.—ಕಾರ್ನರ್ಡ್ ಎನ್ನುವ ಪದದ ಬಗ್ಗೆ ಅವರು ಸ್ವಲ್ಪ ಮನಸ್ಸನ್ನು ಕೆಡಿಸಿಕೊಂಡಿದ್ದಾರೆ. ಅದು ಒಳ್ಳೆಯ ಪದ. ಆ ಪದದ ಹಿನ್ನೆಲೆಯಲ್ಲಿ ಧೈರ್ಯದಿಂದ ಮುನ್ನುಗ್ಗಿ ರೆಸಲ್ಯೂಷನ್ನನ್ನು ತೆಗೆದುಕೊಂಡು ಬನ್ನಿ. ನಾವೆಲ್ಲಾ ಒಪ್ಪುತ್ತೇವೆ. ಪತ್ರಿಕೆಯವರು ಬರೆದದ್ದು ಅಷ್ಟೇನು ಸುಳ್ಳಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಒಂದು ವಿಷಯ ಸ್ವಾಮಿ. ಪತ್ರಿಕೆಯಲ್ಲಿ ಆ ರೀತಿ ಹೇಳಿಲ್ಲ.

In fact, they have praised him. It says thus:

> "This lead to a highly embarrasing situation, with the Minister, one of the ablest parliamentarians in the House, also getting a little unsettled over the virtual onslaught"

ಹೇಳಿಕೆಯ ಮೇಲುಗಡೆ, ಹೌಸ್ ಕಾರ್ನರ್ಡ್ ದೇವೇಗೌಡ ಎಂದು ಇದೆ, ಅದರಲ್ಲಿ ಇನ್‌ಸಿನೇಷನ್ ಏನೂ ಬಂದಿಲ್ಲ. ಇದರ ಬಗ್ಗೆ ದೇವೇಗೌಡರು ಎಂಬ್ಯಾಸಿಂಗ್ ಎಂದು ತಿಳಿಯಬೇಕಾದ ಅವಶ್ಯಕತೆ ಇಲ್ಲ. ಪ್ರಾಬ್ಲಮ್ ಏನೂ ಇಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಪತ್ರಿಕೆಯಲ್ಲಿ ಏನು ಬರೆದಿದ್ದಾರೆ ಎಂದರೆ

> "The P.W.D. Minister Sri H. D. Devegowda was cornored by almost entire House, with the Janatha Members certainly not lacking behind, when he declared that if the House so desired, the Government would even bring forth a resolution making it mandatory to spend Rs. 300/- crores required every year to complete all the projects in the Krishna Basin by 2000 AD"

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ತಾವು ಕುಳಿತುಕೊಳ್ಳಿ.

SRI M.S. KRISHNAN.—This paper commits Mr. Devegowda saying that the Government will bring a resolution, but he never said that the Government will bring a resolution. ಅವರು ಏನು ಹೇಳಿದ್ದುದು ಎಂದರೆ ಈ ಮನೆ ಅಭಿಪ್ರಾಯಪಟ್ಟರೆ ನಮ್ಮದೇನೂ ವಿರೋಧ ಇಲ್ಲ ಎಂದು. ಮಾನ್ಯ ಕಡಪಟ್ಟಿಯವರು ೩೦೦ ಕೋಟಿ ರೂಪಾಯಿಗಳಿಗೆ ನಿರ್ಣಯವನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಅದಕ್ಕೆ ನಾವು ಬೆಂಬಲ ಕೊಡುತ್ತೇವೆ ಎಂದು ಹೇಳಿದರು. ಆದರಂತೆ ನಾವೆಲ್ಲರೂ ಕೂಡಾ ತೆಗೆದುಕೊಂಡು ಬನ್ನಿ, ನಾವೆಲ್ಲರೂ ಬೆಂಬಲವನ್ನು ಕೊಡುತ್ತೇವೆ ಎಂದೂ ಹೇಳಿದೆವು. ಈಗಲೂ ಕೂಡಾ ತಮಗೆ ಫುಲ್ ಬೆಂಬಲ ಇದೆ. ಬಹುಶಃ ನಿರ್ಣಯವನ್ನು ತೆಗೆದು ಕೊಂಡು ಬರಲಿಕ್ಕೆ ಎಂದು ಪ್ರಚೋದನೆ ಮಾಡುವುದಕೋಸ್ಕರ ಬರೆದಿದ್ದಾರೆ. ತಡಮಾಡದೆ ತೆಗೆದು ಕೊಂಡು ಬನ್ನಿ ಒಳ್ಳೆಯದಾಗುತ್ತದೆ ಒಳ್ಳೆಯ ಕೆಲಸಕ್ಕೆ ಈ ಪ್ರಚೋದನೆ.

ಅಧ್ಯಕ್ಷರು.—ಮಾನ್ಯ ಕಡಪಟ್ಟಿಯವರು ಏನು ಹೇಳುತ್ತಾರೋ ನೋಡಿ.

ಶ್ರೀ ಎಸ್.ಎಸ್. ಕಡಪಟ್ಟಿ.—ಮಾನ್ಯ ವೀರಪ್ಪ ಮೊಯಿಲಿಯವರು ಇದರಲ್ಲಿ ರಾಜಕೀಯ ಬೆರೆಸುವುದು ಬೇಡ. ರಾಜ್ಯದ ಹಿತರಕ್ಷಣೆಗಾಗಿ, ರಾಜ್ಯದ ಸಂಪೂರ್ಣವಾದ ನೀರಿನ ಬಳಕೆಗಾಗಿ ನಾವು ಯಾರೂ ಕೂಡ ಹಿಂದೆ ಬೀಳುವುದಿಲ್ಲ. ಇದರಲ್ಲಿ ರಾಜಕೀಯ ಬೆರೆಸುವುದು ಬೇಡ, ಈ ಮನೆಯ ಸದಸ್ಯನಾಗಿ, ರಾಜ್ಯದ ಬರಗಾಲದ ಪ್ರದೇಶದಿಂದ ಬಂದವನಾಗಿ ೧೩ನೇ ಶತಮಾನದಿಂದ ಬರಗಾಲದ ಬವಣೆಯನ್ನು ಅನುಭವಿಸುತ್ತಿರತಕ್ಕಂಥ ಪ್ರದೇಶದಿಂದ ಬಂದವನಾಗಿ ಕಳಕಳಿಯಿಂದ ೩೦೦ ಕೋಟಿ ರೂಪಾಯಿಗಳ ಈ ಯೋಜನೆಗೆ ಹಣ ಬೇಕು ಎನ್ನುವ ದೃಷ್ಟಿಯಿಂದ ಹೇಳಿದ್ದೇನೆ. ಆ ದೃಷ್ಟಿಯಿಂದ ಈ ಮನೆ ಒಪ್ಪಿದರೆ ರೆಸಲ್ಯೂಷನನ್ನು ನಾನೇ ಮೂವ್ ಮಾಡುತ್ತೇನೆ. ಕಾವೇರಿ ಬೇಸಿನ್‌ಗೆ ಹಣ ಕೇಳುವುದರಲ್ಲಿ ತಪ್ಪಿಲ್ಲ. ಅದಕ್ಕೆ ನೂರು ಕೋಟಿ ರೂಪಾಯಿಗಳನ್ನು ಕೊಡಿ. ಇದರಲ್ಲಿ ರಾಜಕೀಯ ಬೆರೆಸಬಾರದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ರಾಜಕೀಯ ನೀವು ಮಾಡುತ್ತಿದ್ದೀರಿ. ರಾಜಕೀಯ ಬೆರೆಸುವುದು ಎಂದು ಹೇಳಿದರೆ ಏನು ಅರ್ಥ ? ನಾವೆಲ್ಲರೂ ಒಪ್ಪಿಗೆಯನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು.—ನೀವು ಯಾರೂ ರಾಜಕೀಯ ಮಾಡಲಿಲ್ಲ ಬಿಡಿ, ರಾಜಕೀಯ ಯಾರೂ ತಂದಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಕಡಪಟ್ಟಿಯವರು ನಿನ್ನೆಯ ದಿವಸ ೩೦೦ ಕೋಟಿ ರೂಪಾಯಿಗಳು ಎಂದು ಹೇಳಿ ಇವತ್ತು ೧೦೦ ಕೋಟಿರೂಪಾಯಿಗಳನ್ನು ಕೊಡಿ ಎಂದು ಹೇಳುತ್ತಿದ್ದಾರೆ. ಇದು ಏತಕ್ಕೆ ಎಂದು ಗೊತ್ತಿಲ್ಲ. ೩೦೦ ಕೋಟಿ ರೂಪಾಯಿಗಳನ್ನು ಕೊಡಲಿಕ್ಕೆ ನಾವು ಒಪ್ಪಿದ್ದೇವೆ.

ಶ್ರೀ ಹೆಚ್.ಡಿ. ದೇವೇಗೌಡ.—೩೦೦ ಕೋಟಿ ಕೊಡುವುದೋ ೨೫೦ ಕೋಟಿ ಕೊಡುವುದೋ ೪೦೦ ಕೋಟಿ ಕೊಡುವುದೋ ಅದನ್ನು ಈ ಸದನ ತೀರ್ಮಾನ ಮಾಡಬೇಕು ಎಂದು ಹೇಳಿದ್ದೇನೆ. ಇವತ್ತೂ ಹೇಳುತ್ತೇನೆ. ಏಕೆಂದರೆ ಗೌರ್ನಮೆಂಟ್ ಬಜೆಟ್ ಮಂಡನೆ ಮಾಡಿದ ಮೇಲೆ ಅದರ ಬಗ್ಗೆ ಓಟ್ ಮಾಡುವುದು ಈ ಸದನ. ಸದನದ ಸುಪ್ರೀಮಸಿ ಬಗ್ಗೆ ನಾನು ಹೇಳಿದೆ. ನಾವು ರೆಸಲ್ಯೂಷನ್ ತರುತ್ತೇವೆ ಎಂದು ಹೇಳಲಿಲ್ಲ. ಮಾನ್ಯ ವೀರಪ್ಪ ಮೊಯಿಲಿಯವರು ಸುಪ್ರಸಿದ್ಧ ನ್ಯಾಯವಾದಿಗಳು. ಮಾನ್ಯ ಬಸವಲಿಂಗಪ್ಪನವರು ಸುಪ್ರಸಿದ್ಧ ನ್ಯಾಯವಾದಿಗಳು. ಮಾನ್ಯ ವೆಂಕಟರಾಮಯ್ಯನವರೂ ಸುಪ್ರಸಿದ್ಧ ನ್ಯಾಯವಾದಿಗಳು. ನೀವೂ ವ್ಯಾಖ್ಯಾನ ಮಾಡಿದಿರಲ್ಲಾ ಅದಕ್ಕೆ ಆಷ್ಟೇ ನೋವು. ಬಾಕಿಯದಕ್ಕೆ ಏನೂ ಇಲ್ಲ. ರೆಸಲ್ಯೂಷನ್ ತರುವುದು ಬೇರೆ ವಿಚಾರ. ಇದು ಬರೀ ಆಳುವ ಪಕ್ಷದ ಪ್ರಶ್ನೆಯಲ್ಲ. ಯಾರು ಬೇಕಾದರೂ ನಿರ್ಣಯ ತರಬಹುದು. ನೀವು (ವಿರೋಧ ಪಕ್ಷದವರು) ನಮ್ಮನ್ನು ರೆಸಲ್ಯೂಷನ್ ತನ್ನಿ ಎಂದು ಹೇಳಿದರೆ ನಿಮಗೆ ಆಸಕ್ತಿ ಇಲ್ಲ ಎಂದು ಆಯಿತೇ?

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ತರುತ್ತೇವೆ ಎಂದು ಹೇಳಿದೆ.

ಶ್ರೀ ಹೆಚ್.ಡಿ. ದೇವೇಗೌಡ.—ಆ ವಿಷಯವನ್ನು ಅಲ್ಲಿಗೇ ಬಿಡುತ್ತೇನೆ. ಮುಂದುವರೆಯೋ ವುದಿಲ್ಲ. ನಮ್ಮ ಕಡೆ ಹೇಳುತ್ತಾ ಇದ್ದರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ.—ನಿಮ್ಮ ಕಡೆಯಿಂದ ನಿರ್ಣಯ ತನ್ನಿ ಎಂದು ಹೇಳುವ ಉದ್ದೇಶ ಕೆಲಸ ಆಗಬೇಕು ಎಂಬುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ನಿರ್ಣಯವನ್ನು ತರುವುದಿಲ್ಲ ಎಂದರೆ ನಾವು ತರುತ್ತೇವೆ.

ಶ್ರೀ ಹೆಚ್.ಡಿ. ದೇವೇಗೌಡ.—ನಾನು ಆ ಜಾಗದಲ್ಲಿ (ವಿರೋಧ ಪಕ್ಷದಲ್ಲಿ) ಕುಳಿತು ಕಾವೇರಿ ನದಿ ನೀರಿನ ಬಳಕೆ ಬಗ್ಗೆ ತಂದ ಖಾಸಗಿ ನಿರ್ಣಯವನ್ನು ಇಡೀ ಸದನ ಸರ್ವಾನುಮತದಿಂದ ಒಪ್ಪಿತು.

ಶ್ರೀ ಬಿ. ಬಸವಲಿಂಗಪ್ಪ.—ನಾವೂ ಒಪ್ಪಿದ್ದೇವೆ.

ಶ್ರೀ ಹೆಚ್.ಡಿ. ದೇವೇಗೌಡ.—ಈ ವಿಚಾರ ಪತ್ರಿಕೆಯಲ್ಲಿ ಬಂದಿರುವುದರಿಂದ ಹೊರಗೆ ಜನರಿಗೆ ಅಪಾರ್ಥ ಕಲ್ಪನೆಯಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಏನೂ ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ನಿಮಗೆ ಪ್ರಚಾರ ಸಿಗುವುದಾದರೆ ಹೋಗಲಿ. ಇಷ್ಟೆಲ್ಲಾ ಪಕೇಲಿ ತೆಗೆದುಕೊಂಡ ನೀವು ನಿಮಗೆ ಪ್ರಚಾರ ಸಿಗುತ್ತದೆಂದು ತಿಳಿದುಕೊಳ್ಳಬೇಡಿ. ಈ ಪತ್ರಿಕೆಯವರು ನನಗೆ ಗೊತ್ತಿದೆ. ನಿಮಗೇನೂ ಪ್ರಚಾರ ಸಿಗುವುದಿಲ್ಲ. ಏತಕ್ಕೆ ಯೋಚನೆ ಮಾಡುತ್ತೀರಿ? ನಿಮ್ಮ ಕಾಲದಲ್ಲಿ ಇದು ಆಗಬಾರದು ಎಂದು ನೋಡಿಕೊಳ್ಳಿ ಎಂದು ವಿನಂತಿ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ದೇವೇಗೌಡರು ಏನು ಹೇಳಿದರು, ಕಾವೇರಿ ನೀರಿನ ಬಗ್ಗೆ ರೆಸಲ್ಯೂಷನ್ ತಂದಿದ್ದೆ ಎಂದು ಹೇಳಿದರು. ನಾವೆಲ್ಲಾ ಅದನ್ನು ಒಪ್ಪಿದ್ದೆವು. ನಾವು ಈಗ ಪುನಃ ತರುತ್ತೇವೆ. ನೀವು ಜನತಾ ಪಕ್ಷದವರು ಅದೇ ದೊಡ್ಡ ಮನಸ್ಸಿನಿಂದ ಒಪ್ಪಿ ಎಂದು ಹೇಳುತ್ತೇನೆ.

ನಿಯಮ ೩೫೪ರ ಮೇರೆಗೆ

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ತಮ್ಮ ೩೫೪ನೇ ನೋಟೀಸನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿದ್ದೇನೆ. ಮಾನ್ಯ ಬಸವರಾಜ್ ಅವರು ೩೫೪ರ ವಿಷಯವನ್ನು ಪ್ರಸ್ತಾಪ ಮಾಡಬಹುದು.

(೧.) ಕೊಳಲಗಿರಿ ಪೆಡ್ರೂರು-ದೊಂದೇರಂಗಡಿ ರಸ್ತೆ ಮತ್ತು ಕೊಕ್ಕರಣೆ-ಸಂತೆಕಟ್ಟೆ ರಸ್ತೆಗಳಿಗೆ ಟಾರ್ ಹಾಕಿಸುವುದು

ಶ್ರೀ ಬಸವರಾಜ (ಬ್ರಹ್ಮಾವರ).—ಕಳೆದ ಅಧಿವೇಶನದಲ್ಲಿ ನನ್ನ ಕ್ಷೇತ್ರದ ಎರಡು ಮುಖ್ಯ ರಸ್ತೆಗಳಾದ ಕೊಳಲಗಿರಿ ಪೆಡ್ರೂರು-ದೊಂದೇರಂಗಡಿ ರಸ್ತೆ ಮತ್ತು ಕೊಕ್ಕರಣೆ- ಸಂತೆಕಟ್ಟೆ ರಸ್ತೆಗಳ ಉಳಿದ ಭಾಗಕ್ಕೆ ಟಾರು ಹಾಕಿಸುವ ಬಗ್ಗೆ ಮಾನ್ಯ ಸಚಿವರು ಸದನದಲ್ಲಿ ಆಶ್ವಾಸನೆ ನೀಡಿದ್ದು, ಬಜೆಟ್ಟಿನಲ್ಲಿ ಹಣ ಮಂಜೂರು ಮಾಡಲಾಗಿದೆ ಎಂದು ತಿಳಿದ್ದಾಗ್ಯೂ ಈವರೆಗೆ ಕೆಲಸ ಆರಂಭಿಸಿರುವುದಿಲ್ಲ ವಾದ್ದರಿಂದ ಈ ಕೆಲಸಗಳನ್ನು ಕೂಡಲೇ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸನ್ಮಾನ್ಯ ಸದಸ್ಯರು ಎತ್ತಿರತಕ್ಕ ವಿಷಯದ ಬಗ್ಗೆ ಸಂಪೂರ್ಣ ಪೂರ್ಣ ಮಾಹಿತಿ ಇಲ್ಲ. ಸಂಬಂಧಪಟ್ಟ ಎಲ್ಲಾ ಮಾಹಿತಿ ತರಿಸಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

(೨) ಶಿಕಾರಿಪುರ ಪುರಸಭೆಯವರು ವಿಧಿಸಿದ ಸುಂಕಕ್ಕಿಂತ ಹೆಚ್ಚಿನ ಸುಂಕವನ್ನು ವಸೂಲು ಮಾಡುತ್ತಿರುವುದು

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ಶಿಕಾರಿಪುರ ಪುರಸಭೆಯವರು ೧೯೮೫-೮೬ನೇ ಸಾಲಿಗೆ ಶಿಕಾರಿಪುರ ಸಂತೆಯಲ್ಲಿ 'ಸುಂಕ'ವನ್ನು ವಸೂಲು ಮಾಡುವ ಬಗ್ಗೆ ಹರಾಜ್ ಮೂಲಕ ಒಬ್ಬ ಕಂಟ್ರಾಕ್ಟರ್‌ದಾರರಿಗೆ ವಸೂಲಿ ಮಾಡುವ ವ್ಯವಸ್ಥೆ ಮಾಡಿದ್ದು ಕಳೆದ ಎರಡು ಮೂರು ತಿಂಗಳಿಂದ ಪುರಸಭೆಯವರು ನಿಗದಿ ಮಾಡಿರುವುದಕ್ಕಿಂತ ಹೆಚ್ಚಿನ ಸುಂಕ ವಸೂಲು ಮಾಡುತ್ತಿದ್ದು ಅದನ್ನು ಪ್ರತಿಭಟಿಸಿದ ರೈತರಿಗೆ ಕಂಟ್ರಾಕ್ಟ್‌ದಾರರ ಕಡೆಯವರು ಕೈಮಾಡಿ ಪೋಲೀಸ್ ಕಂಪ್ಲೇಂಟ್ ಸಹ ಹೋಗಿರುತ್ತದೆ. ಅದಲ್ಲದೆ ಕಂಟ್ರಾಕ್ಟ್ ಪಡೆದ ದಿವಸದಿಂದ ಈವರೆಗೆ ಕಾನೂನಿನಂತೆ ಅಗತ್ಯವಾದ ಅಗ್ರಿಮೆಂಟ್ ಸಹ ಮಾಡಿಕೊಡದೆ ೩-೪ ತಿಂಗಳ ಕಂತಿನ ಹಣವನ್ನು ಪಾವತಿ ಮಾಡದಿದ್ದರೂ ಅವರ ಮೇಲೆ ಕಾನೂನಿನಂತೆ ಕ್ರಮ ಕೈಗೊಂಡಿಲ್ಲದೆ ಸರಕಾರದ ಬೊಕ್ಕಸಕ್ಕೆ ಧಕ್ಕೆ ಆಗಿದೆ. ಈ ಹಿಂದೆ ಸಹ ಇದೇರೀತಿ ಪ್ರಕರಣಗಳು ನಡೆದಿದ್ದು ಪುರಸಭೆಗೆ ಕಟ್ಟಬೇಕಾದ ಕಂತಿನ